**ದಿನಾಂಕಃ 05-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

8. ಜಪ್ತು ಮಾಡಿದ ದಾಖಲಾತಿಗಳನ್ನು ನಾನು ಸ್ವತ್ತಿನ ಪಟ್ಟಿ ಸಂಖ್ಯೆ 2/2005 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕಃ 09.09.2005 ರಂದು ಪಂಚರಾಗಿ ಸಹಕರಿಸಲು ಮನವಿ ಪತ್ರಗಳನ್ನು ಸಿದ್ದಾಪುರ ತಹಶೀಲ್ದಾರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಕಳುಹಿಸಿರುತ್ತೇನೆ. ಅದನ್ನು ನಿಪಿ-26 ಮತ್ತು ನಿಪಿ-27 ನಾನು ಕಳುಹಿಸಿದ ಮನವಿ ಪತ್ರಗಳು ಆಗಿವೆ. ನಿಪಿ-26(ಎ) ಮತ್ತು ನಿಪಿ-27(ಎ) ನನ್ನ ರುಜುಗಳು ಆಗಿವೆ. ಆ ಮನವಿ ಪತ್ರಗಳ ಮೇರೆಗೆ ಚಾಸಾ-3 ಮತ್ತು 4 ರವರು ಸಿದ್ದಾಪುರದ ಪರಿವೀಕ್ಷಣಾ ಮಂದಿರದಲ್ಲಿ ಅದೇ ದಿನ ನನ್ನ ಮುಂದೆ ಹಾಜರಾದರು. ಅವರಿಗೆ ಪ್ರಕರಣದ ವಿಷಯ ತಿಳಿಸಿ ಪಂಚನಾಮೆ ಮಾಡುವ ಕುರಿತು ಸಿಬ್ಬಂದಿಯವರೊಂದಿಗೆ ಹಾಗೂ ಪಂಚರೊಂದಿಗೆ ಕಾನಗೋಡು ಗ್ರಾಮ ಪಂಚಾಯತಿ ಕಛೇರಿಗೆ ಹೋದೆವು. ದಿನಾಂಕಃ 08.09.2005 ರಂದು ಜಪ್ತು ಮಾಡಿದ್ದ ದಾಖಲಾತಿಗಳ ಪೈಕಿ ಕ್ರಮ ಸಂಖ್ಯೆ 2 ರಲ್ಲಿ ನಮೂದಿಸಿರುವ 200 ಜನ ಫಲಾನುಭವಿಗಳ ಪಟ್ಟಿಯನ್ನು ಬೆರಳಚ್ಚು ಮಾಡಿ ಅದಕ್ಕೆ 'ಎ' ಪಟ್ಟಿ ಎಂದು ಗುರುತಿಸಿರುತ್ತೇನೆ. ಕ್ರಮ ಸಂಖ್ಯೆ 3 ರಲ್ಲಿ ನಮೂದಿಸಿದ 100 ಜನ ಫಲಾನುಭವಿಗಳ ಪಟ್ಟಿಯನ್ನು ಬೆರಳಚ್ಚು ಮಾಡಿ ಅದಕ್ಕೆ 'ಬಿ ' ಪಟ್ಟಿ ಎಂದು ಗುರುತಿಸಿರುತ್ತೇನೆ. ಕ್ರಮ ಸಂಖ್ಯೆ 5 ರಲ್ಲಿ 111 ಜನ ಫಲಾನುಭವಿಗಳ ಪಟ್ಟಿಯನ್ನು ಬೆರಳಚ್ಚು ಮಾಡಿ ಅದಕ್ಕೆ 'ಸಿ' ಪಟ್ಟಿ ಎಂದು ಗುರುತಿಸಿರುತ್ತೇನೆ. ನಂತರ ಆ ಗ್ರಾಮ ಪಂಚಾಯತಿ ಕಛೇರಿಯಿಂದ ಪಂಚರು, ಸಿಬ್ಬಂಧಿ, ಚಾಸಾ-7 ಮತ್ತು 8 ರವರೊಂದಿಗೆ ವಯಕ್ತಿ ಶೌಚಾಲಯಗಳ ಪರಿಶೀಲನೆ ಕುರಿತು ಕಾನಗೋಡು ಗ್ರಾಮ ಮತ್ತು ಅದಕ್ಕೆ ಸಂಬಂಧ ಪಟ್ಟ ಮಜರೆಗಳಿಗೆ ಹೋದೆವು. ದಿನಾಂಕಃ 09.09.2005 ಮತ್ತು 10.09.2005 ರಂದು ಆ ಗ್ರಾಮದಲ್ಲಿ ಮತ್ತು ಅದರ ಮಜರೆಗಳಲ್ಲಿ ಪರಿಶೀಲನೆ ಮಾಡಿದೆವು . ಅಲ್ಲಿ ಪ್ರತಿಯೊಂದು ವಯಕ್ತಿಕ ಶೌಚಾಲಯಕ್ಕೆ ಕ್ರಮ ಸಂಖ್ಯೆಯನ್ನು ನೀಡಿ ಅದರ ಮಾಲೀಕರ ಹೆಸರನ್ನು ಪಟ್ಟಿ ಎ ಬಿ ಮತ್ತು ಸಿ ರಲ್ಲಿ ನಮೂದು ಆಗಿದ್ದಲ್ಲಿ ಗುರುತಿಸಿ ನಮೂದು ಆಗಿಲ್ಲದ ಪಕ್ಷದಲ್ಲಿ 'ಡಿ' ಎಂದು ಇನ್ನೊಂದು ಪಟ್ಟಿಯನ್ನು ಮಾಡಿ ನಮುದಿಸಿರುತ್ತೇನೆ . ಒಟ್ಟಾರೆಯಾಗಿ 111 ವಯಕ್ತಿಕ ಶೌಚಾಲಯಗಳು ವಿವಿಧ ಹಂತಗಳಲ್ಲಿ ಇದ್ದು , ಅವುಗಳಲ್ಲಿ 7 ಶೌಚಾಲಯಗಳನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಂಡಿದ್ದರು. 5 ಶೌಚಾಲಯಗಳನ್ನು ನಿರ್ಮಲ ಕರ್ನಾಟಕ ಯೋಜನೆ

ಅಡಿಯಲ್ಲಿ ನಿರ್ಮಾಣ ಮಾಡಿದ್ದಾಗಿ ಅವುಗಳ ಮಾಲೀಕರು ತಿಳಿಸಿರುತ್ತಾರೆ . 99 ಶೌಚಾಲಯಗಳನ್ನು ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ನಿರ್ಮಾಣ ಮಾಡಿದ್ದಾಗಿ ಮಾಲೀಕರು ಮತ್ತು ಗ್ರಾಮ ಪಂಚಾಯತಿ ಸದಸ್ಯರು ಪರಿಶೀಲನೆ ಸಮಯದಲ್ಲಿ ತಿಳಿಸಿರುತ್ತಾರೆ . ಈ ಪಂಚನಾಮೆಯನ್ನು ದಿನಾಂಕಃ 11.09.2005 ರಂದು ಕಾನಗೋಡು ಗ್ರಾಮ ಪಂಚಾಯತಿ ಕಛೇರಿಯಲ್ಲಿ ಬೆಳಿಗ್ಗೆ 12.00 ರಿಂದ 16.15 ಗಂಟೆಯವರೆಗೆ ಮಾಡಿರುತ್ತೇನೆ. ಡಿ ಪಟ್ಟಿಯಲ್ಲಿ ಇದ್ದ ಮೂರು ಜನ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಶೌಚಾಲಯ ಕಟ್ಟಿಕೊಂಡಿರುವುದಾಗಿ ಹೇಳಿರುತ್ತಾರೆ. ಶೌಚಾಲಯ ಕಟ್ಟದೇ ಇರುವವರನ್ನು ವಿಚಾರಿಸಲಾಗಿ ಅವರಿಗೆ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಯಾವುದೇ ಹಣವನ್ನು ನೀಡಿರುವುದಿಲ್ಲ ಮತ್ತು ಶೌಚಾಲಯವನ್ನು ಸಹಾ ನಿರ್ಮಿಸಿ ಕಟ್ಟಿರುವುದಿಲ್ಲ ಎಂದು ತಿಳಿಸಿದರು . ಪಟ್ಟಿಯಲ್ಲಿದ್ದ 13 ಜನರ ಹೆಸರಿನ ವ್ಯಕ್ತಿಗಳು ಆ ಗ್ರಾಮದಲ್ಲಿಯೇ ಇಲ್ಲಾ ಎಂದು ಪಂಚಾಯತಿ ಕಾರ್ಯದರ್ಶಿ , ಪಂಚಾಯತಿ ಸದಸ್ಯ ಹಾಗೂ ಗ್ರಾಮ ಸಹಾಯಕರು ತಿಳಿಸಿರುತ್ತಾರೆ. ಎ ಪಟ್ಟಿಯಲ್ಲಿ ಕ್ರಮ ಸಂಖ್ಯೆ 14, 20, 23,32,61,75,80,113 ಹಾಗೂ ಬಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ 78, 83, 95,96 ಮತ್ತು ಸಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ 14 ರವರು ಗ್ರಾಮದಲ್ಲಿ ಇರುವುದಿಲ್ಲ ಎಂದು ತಿಳಿಸಿದ 13 ಜನ ಆಗಿದ್ದಾರೆ. ನಾನು ಮಾಡಿದ ಮೇಲ್ಕಂಡ ಪಟ್ಟಿಗಳು ಮತ್ತು ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ಆ ಪಂಚನಾಮೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಪಂಚನಾಮೆಯನ್ನು ನಿಪಿ-28 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-28(ಎ) ಎಂದು ಗುರುತಿಸಲಾಯಿತು. ನಾನು ತಯಾರಿಸಿದ ಪಟ್ಟಿಗಳು ಸಹಾ ನಿಪಿ-28 ಪಂಚನಾವೆಯಲ್ಲಿಯೇ ನಮೂದಾಗಿರುತ್ತವೆ ಮತ್ತು ಪಂಚನಾಮೆಗೆ ಆ ಪಟ್ಟಿಗಳನ್ನು ಅಡಕಗಳನ್ನಾಗಿ ಲಗತ್ತಿಸಲಾಗಿದೆ. ಆ ಪಟ್ಟಿಗಳಿಗೆ ಸಹಾ ನನ್ನ ಮತ್ತು ಪಂಚರ ರುಜು ಮತ್ತು ಪಂಚಾಯತಿ ಸದಸ್ಯರು ಹಾಗೂ ಕಾರ್ಯದರ್ಶಿಯವರ ರುಜು ಹಾಕಲಾಗಿದೆ . ಪ್ರತಿ ಪುಟದಲ್ಲಿ ಅವರು ರುಜು ಮಾಡಿದ್ದಾರೆ. ನಿಪಿ-28/1 ರಿಂದ 3 ಎಂದು ಪಟ್ಟಿ ಎ, ಬಿ ಮತ್ತು ಸಿ ಎಂದು ಗುರುತಿಸಲಾಯಿತು. ನಿಪಿ-28/1(ಎ) ರಿಂದ 3(ಎ) ನನ್ನ ರುಜು ಆಗಿದೆ. ಡಿ ಪಟ್ಟಿಯನ್ನು ಸಿ ಪಟ್ಟಿಯಲ್ಲಿಯೇ ತೋರಿಸಲಾಗಿದೆ.

9. ದಿನಾಂಕಃ 09.09.2005 ರಂದು ನಾನು ಚಾಸಾ -17 ರಿಂದ 40, 114 ರಿಂದ 116, 119 ರಿಂದ 127 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕಃ 10.09.2005

ರಂದು ನಾನು ಚಾಸಾ -117, 118, 122, 41 ರಿಂದ 67 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕಃ 11.09.2005 ರಂದು ನಾನು ಚಾಸಾ-68 ರಿಂದ 93, 3,4,7 ರಿಂದ 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕಃ 12.09.2005 ರಂದು ಕಾರವಾರದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಪತ್ರ ಬರೆದು ಅನುಮೋದಿತ ಸ್ವಚ್ಛ ಗ್ರಾಮ ಪಟ್ಟಿಯಲ್ಲಿ ನಮೂದಾದ ಫಲಾನುಭವಿಗಳ ಪಟ್ಟಿಯನ್ನು ನೀಡುವಂತೆ ಕೋರಿರುತ್ತೇನೆ. ಅದಕ್ಕೆ ಅವರು ಆ ಬಗ್ಗೆ ಮಾಹಿತಿ ಲಭ್ಯ ಇಲ್ಲ ಎಂದು ಮತ್ತು ಸದರಿ ಮಾಹಿತಿಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು , ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ಉಪವಿಭಾಗ, ಸಿದ್ದಾಪುರ ರವರಲ್ಲಿ ಹಾಗೂ ಗ್ರಾಮ ಪಂಚಾಯತಿ ಕಾನಗೋಡು ರವರಲ್ಲಿ ಲಭ್ಯ ಇರುವುದಾಗಿ ತಿಳಿಸಿರುತ್ತಾರೆ. ನಾನು ಬರೆದ ಆ ಪತ್ರ ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ನೀಡಿದ ಜವಾಬು ಪತ್ರ ಈಗ ನನ್ನ ಕಡತದಲ್ಲಿ ಇದೆ ಆ ಮೂಲ ಪತ್ರಗಳು ನನ್ನ ಕಡತದಲ್ಲಿ ಇದೆ. ಈಗ ನಾನು ಅವುಗಳನ್ನು ಹಾಜರುಪಡಿಸುತ್ತೇನೆ. ( ಅವುಗಳನ್ನು ದೋಷಾರೋಪಣಾ ಪತ್ರದೊಂದಿಗೆ ಹಾಜರುಪಡಿಸಿಲ್ಲ .) ದಿನಾಂಕಃ 13.09.2005 ರಂದು ಸಿದ್ದಾಪುರ ಸ್ಟೇಟ ಬ್ಯಾಂಕ್ ಆಪ್ ಮೈಸೂರು ರವರಿಗೆ ಸ್ವಚ್ಛ ಗ್ರಾಮ ಯೋಜನೆ ಜಂಟಿ ಖಾತೆ ಸಂಖ್ಯೆ 6361 ಖಾತೆಯ ಮಾಹಿತಿಯನ್ನು ಒದಗಿಸಲು ಕೋರಿ ಪತ್ರ ಬರೆದಿರುತ್ತೇನೆ. ಅದೇ ದಿನ ಬ್ಯಾಂಕಿನವರು ಆ ಮಾಹಿತಿಯನ್ನು ಒದಗಿಸಿರುತ್ತಾರೆ. ನಿಪಿ-29 ನಾನು ಆ ಬ್ಯಾಂಕಿಗೆ ಬರೆದ ಪತ್ರ ಆಗಿದೆ. ನಿಪಿ-29(ಎ) ನನ್ನ ರುಜು ಆಗಿದೆ. ನಿಪಿ-30 ರಿಂದ ನಿಪಿ-32 ಬ್ಯಾಂಕಿನವರು ನೀಡಿದ ಆ ಖಾತೆಯ ತಖ್ತೆಯ ದೃಢೀಕೃತ ನಕಲು ಆಗಿದೆ. ನಿಪಿ-33 ಮತ್ತು ನಿಪಿ-34 ಬ್ಯಾಂಕಿನವರು ನೀಡಿದ ಎರಡು ಚೆಕ್ಕುಗಳ ದೃಢೀಕೃತ ನಕಲು ಆಗಿದೆ ಹಾಗೂ ನಿಪಿ-35 ಬ್ಯಾಂಕಿನವರು ನೀಡಿದ ಖಾತೆ ತೆರೆಯಲು ಸಲ್ಲಿಸಿದ ಅರ್ಜಿಯ ದೃಢೀಕೃತ ನಕಲು ಆಗಿದೆ. ದಿನಾಂಕಃ 14.09.2005 ರಂದು ಕಾನಗೋಡು ಗ್ರಾಮ ಪಂಚಾಯತಿ ಕಾರ್ಯದರ್ಶಿಯವರಿಗೆ ನಾನು ಪತ್ರ ಬರೆದು ಶೌಚಾಲಯ ಪರಿಶೀಲನಾ ಪಂಚನಾಮೆ ಸಮಯದಲ್ಲಿ ಆರು ಜನರು ನಿರ್ಮಲ ಕರ್ನಾಟಕ ಯೋಜನೆ ಅಡಿಯಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದಾಗಿ ಆ ಬಗ್ಗೆ ಮಾಹಿತಿ ನೀಡಲು ಕೋರಿದೆ ಹಾಗೂ ಪರಿಶೀಲನಾ ಸಮಯದಲ್ಲಿ 13 ಜನ ಗ್ರಾಮದಲ್ಲಿ ಇಲ್ಲ ಎಂದು ಮಾಹಿತಿ ನೀಡಿದ ಬಗ್ಗೆ ಖಚಿತಪಡಿಸಲು ಕೋರಿದೆ . ಅವರು ಅದಕ್ಕೆ ಉತರವನ್ನು ದಿನಾಂಕಃ 27.09.2005 ರಂದು ಕಳಿಸಿರುತ್ತಾರೆ. ನಿಪಿ-36 ನಾನು ದಿನಾಂಕಃ 14.09.2005 ರಂದು ಬರೆದ ಪತ್ರದ ಕಛೇರಿ ನಕಲು ಆಗಿದೆ. ನಿಪಿ-36(ಎ) ನನ್ನ ರುಜು ಆಗಿದೆ. ನಿಪಿ-37 ಸದರಿ

ಗ್ರಾಮ ಪಂಚಾಯತಿ ಕಾರ್ಯದರ್ಶಿಯವರು ನೀಡಿರುವ ಮಾಹಿತಿ ಆಗಿದೆ. ನಿಪಿ-37 ರಲ್ಲಿ ಕಾರ್ಯದರ್ಶಿಯವರು ನಿರ್ಮಲ ಕರ್ನಾಟಕ ಯೋಜನೆ ಅಡಿಯಲ್ಲಿ ನಿರ್ಮಾಣ ಮಾಡಿದ ಇಬ್ಬರ ಮಾಹಿತಿಯನ್ನು ಮಾತ್ರ ನೀಡಿರುತ್ತಾರೆ. ಆರು ಜನ ಪೈಕಿ ಉಳಿದ ನಾಲ್ಕು ಜನರ ಮಾಹಿತಿ ಲಭ್ಯ ಇಲ್ಲ ಎಂದು ಹೇಳಿರುತ್ತಾರೆ ಹಾಗೂ 13 ಜನ ಫಲಾನುಭವಿಗಳು ಗ್ರಾಮದಲ್ಲಿ ಇಲ್ಲಾ ಎಂಬುದನ್ನು ಖಚಿತಪಡಿಸಿರುತ್ತಾರೆ. ಅದೇ ದಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜಿಲ್ಲಾ ಪಂಚಾಯತ ಇಂಜಿನಿಯರಿಂಗ್ ಉಪವಿಭಾಗ ಸಿದ್ದಾಪುರ ಇವರಿಗೆ ಪತ್ರ ಬರೆದು ಸ್ವಚ್ಛ ಗ್ರಾಮ ಯೋಜನೆಗೆ ಸಂಬಂಧಿಸಿದಂತೆ ಇರುವ ಅಳತೆ ಪುಸ್ತಕ , 2001 ರಿಂದ ಇವರೆಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾಗಿ ಕೆಲಸ ನಿರ್ವಹಿಸುವವರ ವಿವರ , ಕಾನಗೋಡು ಸ್ವಚ್ಛ ಗ್ರಾಮ ಯೋಜನೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸಿದ ಅಧಿಕಾರಿ ವಿವರ, ಅನುಸ್ಟಾನ ಮಾಡಿದ ಬಗ್ಗೆ ವರದಿಗಳು ಇದ್ದಲ್ಲಿ ಸಲ್ಲಿಸುವಂತೆ ಕೋರಿದೆ . ನಿಪಿ-38 ನಾನು ಬರೆದ ಪತ್ರ ಆಗಿದೆ. ನಿಪಿ-38(ಎ) ನನ್ನ ರುಜು ಆಗಿದೆ. ಅದು ಕಛೇರಿ ನಕಲು ಆಗಿದೆ. ದಿನಾಂಕಃ 26.09.2005 ರಂದು ಆ ಪತ್ರಕ್ಕೆ ಅವರು ಉತ್ತರವನ್ನು ನಿಪಿ-39 ರ ಪ್ರಕಾರ ಅವರು ನೀಡಿರುತ್ತಾರೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ . ನಿಪಿ-39(ಎ) ನನ್ನ ರುಜು ಆಗಿದೆ. ನಿಪಿ-39 ರಲ್ಲಿ ಕಾರ್ಯನಿರ್ಹಿಸಿದ ಅಧಿಕಾರಿಗಳ ವಿವರಗಳನ್ನು ಹಾಗೂ ಲಭ್ಯ ಇರುವ ಪ್ರಗತಿ ವರದಿಗಳ ವಿವರವನ್ನು ನೀಡಿರುತ್ತಾರೆ. ಅಳತೆ ಪುಸ್ತಕದಲ್ಲಿ ಶೌಚಾಲಯ ನಿರ್ಮಿಸಿದ ಬಗ್ಗೆ ನಮೂದು ಇಲ್ಲಾ ಎಂದು ತಿಳಿಸಿರುತ್ತಾರೆ. ನಿಪಿ-39/1 ಮತ್ತು 2 ಆ ಪತ್ರದಲ್ಲಿಯೇ ಅವರು ಸಲ್ಲಿಸಿರುವ ಅಡಕಗಳು ಆಗಿವೆ. ಅವುಗಳಿಗೂ ಸಹಾ ನಾನು ರುಜು ಮಾಡಿದ್ದೇನೆ . ನಿಪಿ-39/1(ಎ) ಮತ್ತು 2(ಎ) ನನ್ನ ರುಜು ಆಗಿದೆ. ನಿಪಿ-39/1 ಪ್ರಗತಿ ವರದಿಯಲ್ಲಿ ಕಾಮಗಾರಿ ಮುಗಿದಿದ್ದು ಅಂತಿಮ ಬಿಲ್ಲನ್ನು ಸಲ್ಲಿಸಲಾಗಿದೆ ಎಂದು ನಮೂದಿಸಲಾಗಿದೆ. ನಿಪಿ-39/2 ರಲ್ಲಿ 210 ಶೌಚಾಲಯಗಳಲ್ಲಿ 135 ಭೌತಿಕ ಗುರಿ ಸಾಧನೆ ಮಾಡಲಾಗಿದೆ ಎಂದು ನಮೂದಿಸಿರುತ್ತಾರೆ. ಅದೇ ದಿನ ಸಿದ್ದಾಪುರ ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ನಾನು ಪತ್ರ ಬರೆದು 2001 ರಿಂದ ಇಲ್ಲಿಯವರೆಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದವರ ವಿವರ , ಅವರ ಪ್ರಭಾರ ವಹಿಸಿಕೊಂಡ ದಾಖಲಾತಿಗಳು ಹಾಗೂ ಸಾಮಗ್ರಿಗಳು , ಪಟ್ಟಿ ಹಾಗೂ ಬ್ಯಾಂಕಿನಲ್ಲಿ ಜಂಟಿ ಖಾತೆ ಇರುವುದರಿಂದ ವರ್ಗಾವಣೆ ಆಗಿ ಬಂದ ಕಾರ್ಯದರ್ಶಿ ರವರ ಮಾದರಿ ಸಹಿಗಳನ್ನು ಬ್ಯಾಂಕಿಗೆ ದೃಢೀಕರಿಸಿ ಕಳುಹಿಸಿದ ಬಗ್ಗೆ ನಕಲುಗಳು ಹಾಗೂ ಅವರ ಸೇವಾ ವಿವರವನ್ನು ಒದಗಿಸುವಂತೆ

ಕೋರಿದೆ. ನಿಪಿ–40 ನಾನು ಬರೆದ ಪತ್ರದ ಕಛೇರಿ ಪ್ರತಿ ಆಗಿದೆ. ನಿಪಿ–40(ಎ) ನನ್ನ ರುಜು ಆಗಿದೆ. ಆ ಪತ್ರದೊಂದಿಗೆ ನಾನು ನಮೂನೆ ಅನ್ನು ಸಹಾ ಲಗತ್ತಿಸಿರುತ್ತೇನೆ. ಅದು ನಿಪಿ–40/1 ಆಗಿದೆ. ನಿಪಿ–40/1(ಎ) ನನ್ನ ರುಜು ಆಗಿದೆ. ದಿನಾಂಕಃ 15.09.2005 ರಂದು ಸದರಿ ಕಾರ್ಯನಿರ್ವಾಹಕ ಅಧಿಕಾರಿಯವರು ನನ್ನ ಪತ್ರಕ್ಕೆ ಉತ್ತರವನ್ನು ಸಲ್ಲಿಸಿರುತ್ತಾರೆ. ಅದರೊಂದಿಗೆ ಮಾಹಿತಿಯ ವಿವರವನ್ನು ಲಗತ್ತಿಸಿರುತ್ತಾರೆ. ನಿಪಿ–41 ಅವರು ಕಳಿಸಿದ ಪತ್ರ ಆಗಿದೆ. ನಿಪಿ–41/1 ರಿಂದ 11 ಆ ಪತ್ರಕ್ಕೆ ಅವರು ಲಗತ್ತಿಸಿರುವ ಅಡಕಗಳು ಅಗಿವೆ. ಅದನ್ನು ನಾನು ದಿನಾಂಕಃ 04.10.2005 ರಂದು ಸ್ವೀಕರಿಸಿದ್ದೇನೆ.

10. ದಿನಾಂಕಃ 23.09.2005 ರಂದು ಕಾರವಾರ ಭೂಸೇನಾ ನಿರ್ದೇಶಕರಿಗೆ ಪತ್ರ ಬರೆದು ಕಾನಗೋಡು ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳಿಗೆ ಎಷ್ಟು ಕಂತಿನಲ್ಲಿ ಹಣ ಬಿಡುಗಡೆ ಆಗಿದೆ ಅದಕ್ಕೆ ಸಂಬಂಧಿಸಿದ ಡಿಡಿ ವಿವರ , ಹಣ ಬಿಡುಗಡೆ ಸಲುವಾಗಿ ಸಿದ್ದಾಪುರ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಕಾರ್ಯನಿರ್ವಹಾಕ ಅಭಿಯಂತರರು ( ಜಿಲ್ಲಾ ಪಂಚಾಯತಿ) ಬರೆದಿರುವ ಕೋರಿಕೆ ಪತ್ರಗಳು, ಕಾಮಗಾರಿ ಪೂರ್ತಿ ಆದ ಮೇಲೆ ವರದಿ ಮಾಡಿದ ಅಧಿಕಾರಿ ವಿವರ , ಆ ಬಗ್ಗೆ ಅವರು ಪತ್ರ ನೀಡಿದ್ದಲ್ಲಿ ಅದರ ದೃಢೀಕೃತ ನಕಲು,ಆಯೋಜನೆಗೆ ಬಿಡುಗಡೆ ಮಾಡಿದ ಹಣದ ಬಗ್ಗೆ ಹಾಗೂ ಕಾಮಗಾರಿ ಬಗ್ಗೆ ತಪಾಸಣೆ ಮಾಡಿದ ಅಧಿಕಾರಿ ಹಾಗೂ ಲೆಕ್ಕ ಪರಿಶೋಧಕರ ವಿವರಗಳನ್ನು ನೀಡುವಂತೆ ಕೋರಿದೆ. ನಿಪಿ–42 ನಾನು ಬರೆದ ಆ ಪತ್ರ ಆಗಿದೆ. ನಿಪಿ–42(ಎ) ನನ್ನ ರುಜು ಆಗಿದೆ. ಅದಕ್ಕೆ ಉತ್ತರವನ್ನು ದಿನಾಂಕಃ 27.09.2005 ರಂದು ಅವರು ನೀಡಿದ್ದು , ನಾನು ಅದನ್ನು ದಿನಾಂಕಃ 04.10.2005 ರಂದು ಸ್ವೀಕರಿಸಿದ್ದೇನೆ. ಸ್ವೀಕರಿಸಿದಾಗ ಅದಕ್ಕೆ ನಾನು ರುಜು ಮಾಡಿದ್ದೇನೆ . ನಿಪಿ–43 ಅವರು ಬರೆದ ಪತ್ರ ಆಗಿದೆ. ಅದು ಎರಡು ಹಾಳೆ ಇದೆ. ಅದರೊಂದಿಗೆ ಮೂರು ಅಡಕಗಳು ಇರುತ್ತವೆ. ನಿಪಿ–43/1 ರಿಂದ 3 ಆ ಅಡಕಗಳು ಆಗಿವೆ. ನಿಪಿ–43(ಎ) ಮತ್ತು (ಬಿ), ನಿಪಿ–43/1(ಎ) ರಿಂದ 3(ಎ) ನನ್ನ ರುಜುಗಳು ಆಗಿವೆ.

11. ನಾನು ಈಗ ಹಾಜರುಪಡಿಸಿದ ನಿಪಿ–44 ನಾನು ದಿನಾಂಕಃ 12.09.2005 ರಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ರವರಿಗೆ ಬರೆದ ಪತ್ರ ಆಗಿದೆ. ನಿಪಿ–44(ಎ) ನನ್ನ ರುಜು ಆಗಿದೆ. ದಿನಾಂಕಃ 15.09.2005 ರ ಪತ್ರವನ್ನು ಕಾರವಾರ ಜಿಲ್ಲಾ

ಪಂಚಾಯತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನನಗೆ ಬರೆದಿದ್ದಾರೆ . ಅದು ಮೂಲ ಪತ್ರ ಆಗಿದೆ. ಆ ಪತ್ರವನ್ನು ನಿಪಿ-45 ಎಂದು ಗುರುತಿಸಲಾಯಿತು. ಅದರೊಂದಿಗೆ ಅವರು ಒಂದು ಅಡಕವನ್ನು ಲಗತ್ತಿಸಿರುತ್ತಾರೆ . ನಿಪಿ-45/1 ಆ ಅಡಕ ಆಗಿದ್ದು, ಅವರು ಪ್ರಶ್ನಾವಳಿಗೆ ನೀಡಿರುವ ವಿವರಣೆ ಆಗಿದೆ. ( ನಿಪಿ-44, 45, 45/1 ರ ಪ್ರತಿಗಳನ್ನು ಆರೋಪಿ ಪರ ವಕೀಲರಿಗೆ ಈಗ ಒದಗಿಸಲಾಗಿರುತ್ತದೆ. ದಾಖಲಾತಿಗಳ ಮೇಲೆ ನಕಲು ಪಡೆದ ಬಗ್ಗೆ ಅವರು ಸ್ವೀಕೃತಿ ಸಹಿ ಹಾಕಿದ್ದಾರೆ.)

12. ದಿನಾಂಕಃ 07.11.2005 ರಂದು ನನಗೆ ವರ್ಗಾವಣೆ ಆಗಿದ್ದರಿಂದ ಮುಂದಿನ ತನಿಖೆಗೆ ಕಡತವನ್ನು ಚಾಸಾ-133 ರವರಿಗೆ ವಹಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

(ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರು ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ . ಸಾಕ್ಷಿಗೆ ರೂ . 500/- ಭತ್ಯೆ ಪಾವತಿ ಮಾಡುವ ಶರತ್ತಿಗೊಳಪಟ್ಟು ಪಾಟೀ ಸವಾಲನ್ನು ಮುಂದೂಡಲಾಗಿದೆ. ಸಾಕ್ಷಿಗೆ ಭತ್ಯೆ ಪಾವತಿ ಮಾಡಿದ್ದಾರೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ